ಮೈಸೂರ ಗೆಜೆಟ

ಸರ್ಕಾರದಿಂದ ಪಾಯಿಷ್ ಆದ್ದು.

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ|| 28, ಸ್ಯ 1889.

ಗಮನ ಈ ಭಾಗವನ್ನು ಪ್ರತ್ಯೇಕ ಕೇರಿಸಿ ಇಡುವ ಬಗ್ಗೆ ಇದಕ್ಕೆ ದೇರೆಯಾಗಿ ಪುಟ ಸಂಖ್ಯೆ ಕೊಡಲ್ಪಮತ್ತೆ.

೨ನೇ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ರು, ವೆಗ್ಯೆರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫೈನ್ಯಾನ್ಷಿಯಲ್ ಇಲಾಖಾ.

1882ನೇ ಇಸವಿಯ ಮೈಸೂರು ರೆಯಿಲ್‌ವೇ ಲೋನ್.

ತಾರೀಖು 6ನೇ ಜುಲೈ 1883.

ಲಂಡನ್‌ನಲ್ಲಿ ಬಡ್ಡೀ ಸಲ್ಲತಕ್ಕ ಬಗ್ಗೆ ಷರಾ ಬರೆಯಲ್ಪಡಬಹುದಾದಂಥಾ ಸದರೀ ಸಾಲದ ಡಿಬೆಂಚರ್‌ಗಳ ಮೇಲೆ ಲಂಡನ್‌ನಲ್ಲಿ, ಸ್ಟ್ಯಾಂಡ್ ಬೀದಿ 59ನೇ ನಂಬರ್ ಕಟ್ಟಡದಲ್ಲಿರುವ ಬ್ಯಾಂಕರ್‌ಗಳಾದ ಮೆಸ್ಸರ್ಸ್ ಕಾಕ್ಸ್ ಅಂಡ್‌ಕೋಯವರು ಬಡ್ಡೀಯನ್ನು ಮಾವತೀ ಮಾಡುವ ಬಗ್ಗೆ ಆವರುಗಳೊಡನೆ ಮೈಸೂರು ಗವರ್ನಮೆಂಟಿನವರು ಯೇರ್ಪಾಡು ಮಾಡಿಕೊಂಡಿರುವದರಿಂದ ಲಂಡನ್‌ನಲ್ಲಿ ತಮ್ಮ ಡಿಬೆಂಚರ್‌ಗಳಿಗೆ ಬಡ್ಡೀಯನ್ನು ತಗದುಕೊಳ್ಳಲಿಕ್ಕೆ ಯಿಷ್ಟವುಳ್ಳ ಜನಗಳು ತಮ್ಮ ಡಿಬೆಂಚರ್‌ಗಳನ್ನು ಎಷ್ಟೆನ್‌ಮೆಂಟ್ ಯಾನೇ ಷರಾ ಬಗ್ಗೆ ಇದರಡಿ ರುಜಾ ಮಾಡಿರುವವರ ಆಫೀಸಿಗೆ ಕಳುಹಿಸತಕ್ಕದ್ದು.

ಬಡ್ಡಿಯು, ಮದ್ರಾಸಿನಲ್ಲಿ ಮದರಾಸ್ ಬ್ಯಾಂಕಿನ ಮೇಲೆ, ಡ್ಯೂಪ್ಲಿಕೇಟಾದ ಡಿವಾಂಡ್ ಡ್ರಾಫ್‌ಟ್ಸ್ ಯೆಂಬ ಚೆಕ್ಕುಗಳ ಮೂಲಕ ರೂಪಾಯಿಗಳಾಗಿ ಕೊಡಲ್ಪಡುವದು.

ಎಷ್ಟೆನ್‌ಮೆಂಟ್ ಬಗ್ಗೆ ಫೀ ಯೇನೂ ಚಾರ್ಜ್ ಮಾಡಲ್ಪಡಲಾರದು.

ಪಿಸ್. ಜಡರ್ಸ್,
ಕಾಂಪ್ಟ್ರೋಲರ್.

ಫಾರೆಸ್ಟ್ ಇಲಾಖಾ.

ತಾರೀಖು 21ನೇ ಸೆಪ್ಟಂಬರ್ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮೈಸೂರು ದೇಶದಲ್ಲಿ ವೃತ್ತಿಯಾದ ಗಂಧದ ಸಾಲೀಯಾನಾ ಹರಾಜುಗಳು ಈ ಕೆಳಗೆ ನಮೂದಾಗುವ ಜಾಗಾಗಳಲ್ಲಿ ಅವುಗಳ ಬಾಜಾದಲ್ಲಿ ನಮೂದಿಸಿರುವ ಕಾರೀಖುಗಳಲ್ಲಿ ಆಯಾಯ ಡಿಸ್ಟ್ರಿಕ್ಟು ಜೆಪ್ಯೆಟಿ ಕಮ್ಮಿಷನರವರು ವ ಫಾರೆಸ್ಟ್ ಆಫೀಸರುಗಳಿಂದ ನಡಿಸಲ್ಪಡುವವು.

ಶಿವಮೊಗ್ಗಾ ಡಿಸ್ಟ್ರಿಕ್ಟು—ತೀರ್ಥಪುರದ ಕೋರಿ	11ನೇ ನವಂಬರ್ 1889	ಹೆಚ್ಚು ಕಡಮೆ 300	ಟನ್‌ಗಳು
ಶಿವಮೊಗ್ಗಾ ಡಿಟೋ ..	15ನೇ ಡಿಟೋ	.. 350	ಡಿಟೋ
ತೀರ್ಥಹಳ್ಳಿ ಡಿಟೋ ..	20ನೇ ಡಿಟೋ	.. 120	ಡಿಟೋ
ಕಡೂರು ಡಿಸ್ಟ್ರಿಕ್ಟು—ಚಿಕ್ಕಮಗಳೂರು ಕೋರಿ	27ನೇ ಡಿಟೋ	.. 200	ಡಿಟೋ
ಹಾಸನ ಡಿಸ್ಟ್ರಿಕ್ಟು—ಹಾಸನ ಕೋರಿ ..	3ನೇ ಡಿಸಂಬರ್	.. 300	ಡಿಟೋ
ಮೈಸೂರು ಡಿಸ್ಟ್ರಿಕ್ಟು—ಶ್ರೀರಂಗಪಟ್ಟಣ ಕೋರಿ	9ನೇ ಡಿಟೋ	.. 400	ಡಿಟೋ
ಹುಣಸೂರು ಡಿಟೋ ..	14ನೇ ಡಿಟೋ	.. 600	ಡಿಟೋ
ಬೆಂಗಳೂರು ಡಿಸ್ಟ್ರಿಕ್ಟು—ಬೆಂಗಳೂರು ಕೋರಿ	19ನೇ ಡಿಟೋ	.. 150	ಡಿಟೋ

ಹರಾಜಿನ ಷರತ್ತುಗಳು—1887ನೇ ಇಸವಿ ಆಗಸ್ಟ್ 27 ಮತ್ತು ಸೆಪ್ಟಂಬರ್ 3ನೇ ಮರ್ತುಂಗಳ 34, 35ನೇ ನಂಬರ್ ಗೆಜೆಟ್ ಗಳಲ್ಲಿ ಛಾಯಿಷ್ ಮಾಡಲ್ಪಟ್ಟ್ಯ ಇಸ್ತಿಹಾರ್‌ಗಳನ್ನ ನೋಡಿಕೊಳ್ಳತಕ್ಕದ್ದು. ಮತ್ತು ಸದರೀ ಇಸ್ತಿಹಾರ್‌ಗಳು ಹರಾಜ್ ಕಾಲದಲ್ಲಿ ಓದ ಲ್ಪಡುವವು.

ತಾರೀಖು 21ನೇ ಸೆಪ್ಟಂಬರು 1889.

ಈ ಕೆಳಗೆ ನಮೂದಾಗಿವೆ ಆನೆಗಳು ಮತ್ತು ಹರಾಜ್ ತಾರೀಖುವರಿಗೆ ಹಿಡಿಯಲ್ಪಡುವ ಆನೆಗಳು ಸಹ 1889ನೇ ಇಸವಿ ನವಂಬರು ತಾರೀಖು 4ರಲ್ಲು ಮೈಸೂರಿನಿಂದ 30 ಮೈಲಿ ಛಾಸಲೆಯಲ್ಲಿ ಇರುವ ಪೆಗ್ಗಡದೇವನ ಕೋಟೇ ತಾಲ್ಲೂಕು ಹಂಪಾಪುರದ ಪೊಕ್ಕಾಂನಲ್ಲಿ ಫಾರೆಸ್ಟ್ ಅಸಿಸ್ಟೆಂಟ್ ಕಂಜರ್ವೇಟರವರಿಂದ ಬಹಿರಂಗವಾದ ಹರಾಜ್ ಮೂಲಕ ವಿಕ್ರಯಿಸಲ್ಪಡುತ್ತೆ.

ನಂಬರು.	ಹೆಸರು.	ಜಾತಿ.	ಯೆತ್ತರ.		ಹಿಡದ ತಾರೀಖು.	ಷರಾ.
			ಅಡಿ	ಅಂಗುಲ		
1	ಬಲರಾಮ	ಗಂಡು	5	2	88ನೇ ಡಿಕಂಬರ್ ತಾರೀಖು 2	
2	ಕೃಷ್ಣ	ಪಿಟೋ	4	..	22—6—89	

ಷರಪ್ತುಗಳು—ಸರ್ಕಾರ ಹರಾಜ್ ಕೈದಾದೆ ಕೂಡ್ಲೆ ಚದ ದರಖಾಸ್ತುದಾರನು ಹರಾಜ್ ಮೊಬಲಗಿನ ಮೇಲೆ ಶೇಕಡಾ 25 ರೂಪಾಯಿ ಶೇವಣಿಯನ್ನ ಪಾವತಿಮಾಡತಕ್ಕದ್ದು. ಬಾಕಿ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳವೊಳಗಾಗಿ ಪಾವತಿಯಿಂದ ಆನೆಯನ್ನು ತೆಗದುಕೊಂಡು ಹೋಗತಕ್ಕದ್ದು ಇದಕ್ಕೆ ತಪ್ಪಿದಲ್ಲಿ ಶೇವಣಿ ಮೊಬಲಗು ಸರ್ಕಾರಕ್ಕೆ ವಾಜಲ್ಯಾಡಿಕೊಳ್ಳಲಾಗುತ್ತೆ ಮತ್ತು ಸದರೀ ಆನೆಗಳು ಪುನಹಾ ಹರಾಜ್ ಮಾಡುವದರಲ್ಲಿ ವುಂಟಾಗಬಹುದಾದ ಲುಕ್ಸಾನಿಗೆ ಮೊದಲ್ ದರಖಾಸ್ತುದಾರನ್ನ ಗುರಿಮಾಡಲಾಗುತ್ತೆ. ನಫೇ ಬಂದಲ್ಲಿ ದರಖಾಸ್ತುದಾರನಿಗೆ ಕೊಡಲಾಗುವದಿಲ್ಲಾ ದರಖಾಸ್ತುದಾರರು ಅವರು ಪಡಕೊಂಡ ಆನೆಗಳಿಗೆ ಹರಾಜ್ ತಾರೀಖು ಲಾಗಾಯಿತು ತಗಲುವ ಖರ್ಚು ವಹಿಸಬೇಕು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.

ಎಕ್ಸೈಜ್ ಇಲಾಖೆ.

ಪ್ರಕಟನೆ.

ತಾರೀಖು 24ನೇ ಸೆಪ್ಟಂಬರ್ 1889ನೇ ಇಸವಿ ನಂಬರ್ 1029—23.

1. ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಬೆಂಗಳೂರಲ್ಲಿರುವ ಸೆಂಟ್ರಲ್ ಡಿಸ್ಟಿಲರಿಗೆ ಈ ಕೆಳಗೆ ನಮೂದಿಸುವ ಸಾಮಾನುಗಳನ್ನ ಸರಬರಾಯಿ ಮಾಡುವದಕ್ಕೆ ಬೆಂಗಳೂರಲ್ಲಿರುವ ಮೈಸೂರು ಶೀಮೆಯ ಎಕ್ಸೈಸ್ ಕಮ್ಮಿಷನರ್ ಸಾಹೆಬರವರ ಆಫಿಸಿನಲ್ಲಿ ಸ್ಯ 1889ನೇ ಇಸವಿ ಸೆಪ್ಟಂಬರ್ ತಾರೀಖು 30ರ ವರಿಗೂ ಮೊಹರಾದ ಟೆಂಡರುಗಳು ಯಾನೆ ದರಖಾಸ್ತುಗಳು ತೆಗದು ಕೊಳ್ಳಲ್ಪಡುವವು.

ಎರಡು ಗ್ಯಾಲ್ಸ್ ಸಾರಾಯಿ ಹಿಡಿಯತಕ್ಕ ಜಾಡಿಗಳು .. .. 1600.
ಮೇಲಿನ ಜಾಡಿಗಳಿಗೆ ಸರಿಯಾದ ಚೀಣಿಮೊಣ್ಣು ಬಿರಟೆಗಳು .. .. 1600.

ಮೇಲ್ಕಂಡ ಜಾಡಿ ಮತ್ತು ಬಿರಟೆಗಳು ಪೂರ್ತಿಯಾಗಿ ಸರಬರಾಯಿ ಮಾಡಲ್ಪಡುವ ಪರ್ಯಂತರ ಕಂಟ್ರಾಕ್ಟುದಾರನು ದಫಾ ಒಂದಕ್ಕೆ ಐವತ್ತಕ್ಕೆ ಕಮ್ಮಿಯಿಲ್ಲದಂತೆ ಅವೇಕ್ಷಿಸಲ್ಪಟ್ಟ್ಯ ಹಾಗ್ಲೂ ತಂದು ಒಪ್ಪಿಸಬೇಕು.

2. ಪ್ರತಿ ದರಖಾಸ್ತಿನೊಡನೆ ಮುವ್ವತ್ತು ರೂಪಾಯಿಗಳ ಶೇವಣಿಯು ನೋಟು ಮೂಲಕವಾಗಿ ಸಂಚಕಾರ ತರೀಕ ಹಾಜರ್ ಮಾಡಲ್ಪಡಬೇಕು. ಶೇವಣಿ ಮೊಬಲಗು ಯಿಲ್ಲದೆ ಬರುವ ದರಖಾಸ್ತುಗಳು ತಿರಸ್ಕರಿಸಲ್ಪಡುವವು. "ಬೆಂಗಳೂರಲ್ಲಿರುವ ಸೆಂಟ್ರಲ್ ಡಿಸ್ಟಿಲರಿಗೆ ಜಾಡಿಗಳು ಮತ್ತು ಬಿರಟೆಗಳು ಸರಬರಾಯಿ ಮಾಡುವದಕ್ಕೆ ದರಖಾಸ್ತ್" ಎಂದು ದರಖಾಸ್ತು ಲಿಫಾಫೇಮೇಲೆ ಬರಿಯಬೇಕು.

3. ದರಖಾಸ್ತಿನ ಆಕ್ಸೆರ್ ಮಂಜೂರಾತಿಯು ಎಕ್ಸೈಸ್ ಕಮ್ಮಿಷನರವರಿಗೆ ಸೇರಿದ್ದಾಗಿರುತ್ತೆ. ಕಮ್ಮಿದರಖಾಸ್ತನ್ನೇ ಆಗಲಿ ಯಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬ ನಿರ್ಬಂಧವು ಅವರಿಗೆ ಯಿರುವದಿಲ್ಲವು, ಮತ್ತು ಯಾವ ದರಖಾಸ್ತನ್ನೇ ಆಗಲಿ ತಿರಸ್ಕರಿಸಿದ್ದಕ್ಕೆ ಕಾರಣವನ್ನ ಕೊಡಲು ಅವರು ಬದ್ಧರಾಗಿರುವದಿಲ್ಲವು.